ಅಸಲು ದಾವಾ ನಂ.**501/2022**

ಪಿ ಡಬ್ಲ್ಯೂ.**2**

(ಸಾಕ್ಷಿಯನ್ನು ಈ ದಿನ ದಿನಾಂಕ.**19.10.2024** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀಸವಾಲು: **1** ನೇ ಪ್ರತಿವಾದಿ ಪರ ಶ್ರೀ ಎಸ್. ಜಿ. ವೈ ವಕೀಲರಿಂದಃ

ನಮ್ಮ ಬಗಲೂರು ಗ್ರಾಮದಲ್ಲಿ **5000** ಜನ ಸಂಖ್ಯೆ ಇರುತ್ತದೆ. ದಾವಾ ಸ್ವತ್ತಿನ ಸರ್ವೆ ನಂ **142, 86** ಮತ್ತು **186** ಇರುತ್ತದೆ. ಸರ್ವೆ ನಂ.**142/1** ಇದು ನಮ್ಮ ಜಮೀನಿನ ಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ಸರ್ವೆ ನಂ.**142/1** ಇದು ನಮ್ಮ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಇರುತ್ತದೆ. ಸರ್ವೆ ನಂ.**142/1** ಜಮೀನು ಕಬ್ಜಾ ವಹಿವಾಟು **2** ನೇ ಪ್ರತಿವಾದಿ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು **2** ನೇ ವಾದಿ ಕಬ್ಜಾ ವಹಿವಾಟು ಮಾಡುತ್ತಾರೆ. **2** ನೇ ವಾದಿ ಕಬ್ಜಾ ವಾಹಿವಾಟ ಮಾಡದೆ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.**142/1** ಜಮೀನನ್ನು **1** ನೇ ಪ್ರತಿವಾದಿ **2** ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾನೆ ಎಂದರೆ ಸರಿ. ಸರ್ವೆ ನಂ.**142/1** ಕ್ಷೇತ್ರ **3** ಎ **28** ಗುಂಟೆ ಜಮೀನು ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

ನಾನು ಬಗಲೂರು ಗ್ರಾಮದ ನಿವಾಸಿ ಎಂದರೆ ಸರಿ. ನಾನು ಜೇರಟಗಿ ಗ್ರಾಮ ತಾಃ ಜೇವರಗಿ ಅಲ್ಲಿ ವಾಸವಿರುವುದಿಲ್ಲ ಆದರೆ ಬಡಿಗೆತನ ಕೆಲಸ ಮಾಡುತ್ತೇನೆ. **1** ನೇ ಪ್ರತಿವಾದಿಯ ಅಡ್ಡ ಹೆಸರು ಬಡಿಗೇರ ಆಗಿರುತ್ತದೆ. ನಿ.ಪಿ.**27** ರಲ್ಲಿ **1** ನೇ ವಾದಿಯ ಅಡ್ಡ ಹೆಸರು ಜೇರಟಗಿ ಇರುತ್ತದೆ ಎಂದರೆ ಸರಿ. ನಿ.ಪಿ.**28** ರಲ್ಲಿ **2** ನೇ ವಾದಿಯ ಅಡ್ಡ ಹೆಸರು ಬಬಲೂರು ಇರುತ್ತದೆ ಎಂದರೆ ಸರಿ. ಸಾಕ್ಷಿಗೆ **1** ನೇ ಪ್ರತಿವಾದಿಯ ಆಧಾರ ಕಾರ್ಡ ತೋರಿಸಿ ನಿ.ಪಿ.**26** ರಲ್ಲಿರುವ ಆಧಾರ ಕಾರ್ಡ ನಂಬರ ವ್ಯತ್ಯಾಸ ಇರುತ್ತದೆ ಎಂದು ಪ್ರಶ್ನೆ ಕೇಳಲಾಗಿ ಸಾಕ್ಷಿ ಸದರಿ ನಂಬರ ತಪ್ಪಾಗಿ ನಮೂದು ಆಗಿರಬಹುದು ಎನ್ನುತ್ತಾರೆ. ವಂಶವೃಕ್ಷ ತಪ್ಪಾಗಿರುತ್ತದೆ. ನಿ.ಪಿ.**26** ರಲ್ಲಿ ಇರುವ **2** ನೇ ಪ್ರತಿವಾದಿಯ ಭಾವ ಚಿತ್ರ ಮತ್ತು **2** ನೇ ಪ್ರತಿವಾದಿಯ ಆಧಾರ ಕಾರ್ಡನಲ್ಲಿರುವ ಭಾವ ಚಿತ್ರಕ್ಕೆ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ನಿ.ಪಿ.**26** ಕ್ಕೂ ಮತ್ತು ಪ್ರತಿವಾದಿಯರ ಆಧಾರ ಕಾರ್ಡಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ. **1** ನೇ ಪ್ರತಿವಾದಿ **2** ನೇ ಪ್ರತಿವಾದಿಯೊಂದಿಗೆ ದಿಃ**10.04.2013** ರಂದು ಗುಲ್ಬರ್ಗಾದ ರಾಮ

ಮಂದಿರದಲ್ಲಿ ಮದುವೆ ಆಗಿರುತ್ತಾನೆ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. **2** ನೇ ಪ್ರತಿವಾದಿ **1** ನೇ ಪ್ರತಿವಾದಿಯ ಕಾನೂನು ಬದ್ಧ ಹೆಂಡತಿ ಆಗಿರುತ್ತಾಳೆ ಎಂದರೆ ಸರಿಯಲ್ಲ. **1** ಮತ್ತು **2** ನೇ ಪ್ರತಿವಾದಿಯರ ಮದುವೆಯಲ್ಲಿ ಸಿದ್ದಲಿಂಗಯ್ಯ ಹೀರೆಮಠ ಮತ್ತು ಇತರರು ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯ ಮದುವೆ ನಾನು ಹಾಜರಾಗಿರುತ್ತೇನೆ. ಸದರಿ ಮದುವೆ ಬಬಲೂರು ಅಥವಾ ಜೇರಟಗಿಯಲ್ಲಿ ಆಗಿರುತ್ತದೆ ನನಗೆ ನಿಖರವಾಗಿ ಗೊತ್ತಿರುವುದಿಲ್ಲ. ವಾದಿ **1** ನೇ ಪ್ರತಿವಾದಿಯ ಕಾನೂನು ಬದ್ದವಾದ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. **2** ನೇ ವಾದಿ **1** ನೇ ಪ್ರತಿವಾದಿಯ ಮಗನಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ಕೇವಲ **1** ನೇ ಪ್ರತಿವಾದಿ ಕಬ್ಜಾ ವಹಿವಾಟು ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. **1** ನೇ ವಾದಿ **1** ನೇ ಪ್ರತಿವಾದಿಯ ಕಾನೂನು ಬದ್ದ ಹೆಂಡತಿ ಎಂದು ಹೇಳುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. **1** ನೇ ಪ್ರತಿವಾದಿ **2** ನೇ ಪ್ರತಿವಾದಿಯೆದಿಗೆ ಅನೈತಿಕ ಸಂಬಂಧ ಹೊಂದಿರುತ್ತಾಳೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಗ್ರಾಮದ ಬಬಲೂರು ಗ್ರಾಮದಲ್ಲಿ ಜನ ಸಂಖ್ಯೆ ಹೆಚ್ಚು ಇರುವುದರಿಂದ ವಾದಿ ಮತ್ತು ಪ್ರತಿವಾದಿಯರ ಮನೆತನ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ

ಜೆ ಎಂ ಎಫ್ ಸಿ, ಸಿಂದಗಿ.

(ಸಾಕ್ಷಿಯನ್ನು ಈ ದಿನ ದಿನಾಂಕ.**19.10.2024** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀ ಸವಾಲು ಃ **1** ನೇ ಪ್ರತಿವಾದಿ ಪರ ಶ್ರೀ ಎಸ್. ಜಿ. ವೈ ವಕೀಲರಿಂದಃ

ಸರ್ವೆ ನಂ.**142** ಕ್ಷೇತ್ರ **7** ಎಕರೆ. ಸರ್ವೆ ನಂ. **86** ಕ್ಷೇತ್ರ **2** ಎಕರೆ ಇರುತ್ತದೆ. ಉಳಿದ ಜಮೀನಿನ ಕ್ಷೇತ್ರ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.**142/1** ನನ್ನ ಜಮೀನಿಗೆ ಹತ್ತಿ ಇರುವುದಿಲ್ಲ. ಸದರಿ ಜಮೀನಿನ ಕ್ಷೇತ್ರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.**142/1** ರ ಜಮೀನು **1** ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. **1** ನೇ ಪ್ರತಿವಾದಿ **2** ನೇ ಪ್ರತಿವಾದಿ ಸರ್ವೆ ನಂ.**142/1** ಕ್ಷೇತ್ರ **3** ಎ **23** ಗುಂಟೆ ಜಮೀನು ಬಕ್ಷೀಸ್ ಪತ್ರ ಮೂಲಕ ಬಿಟ್ಟು ಕೊಟ್ಟಿರುತ್ತಾನೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ ಮಾತ್ರ ಕಬ್ಜಾವಹಿವಾಟ ಮಾಡುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.**142/1** ರಲ್ಲಿ ಹತ್ತಿ ಬೆಳೆ ಬೆಳೆಯಲಾಗಿದೆ. ಉಳಿದ ದಾವಾ ಜಮೀನಿನಲ್ಲಿ ಏನು ಬೆಳೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ದಾವಾ ಜಮೀನುಗಳನ್ನು ನೋಡಿರುವುದಿಲ್ಲ. **1** ನೇ ಪ್ರತಿವಾದಿಯ ದಿಃ **10.04.2013** ರಂದು **2** ನೇ ಪ್ರತಿವಾದಿಯೊಂದಿಗೆ ಗುಲ್ಬರ್ಗಾದ ರಾಮ ಮಂದಿರದಲ್ಲಿ ಮದುವೆ ಆಗಿರುತ್ತಾನೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. **1** ಮತ್ತು **2** ನೇ ಪ್ರತಿವಾದಿ ಯ ಸಂಬಂಧ ಅನೈತಿಕವಾಗಿದೆಯೋ ಅಥವಾ ಮದುವೆಯಾಗಿದೆಯೋ ನನಗೆ ಗೊತ್ತಿಲ್ಲ. ನನ್ನ ಮುಖ್ಯವಿಚಾರಣೆಯ **5** ನೇ ಪ್ಯಾರದ **9** ನೇ ಸಾಲಿನಲ್ಲಿರುವ ಅನೈತಿಕ ಸಂಬಂಧ ವಿಚಾರ ನಾನು ಸುಳ್ಳು ಬರೆಸಿರುತ್ತೇನೆ ಎಂಬ ಪ್ರಶ್ನೆ ಸಾಕ್ಷಿಗೆ ಕೇಳಿದಾಗ ಸಾಕ್ಷಿ **1** ನೇ ಪ್ರತಿವಾದಿ **1** ನೇ ಮದುವೆ ಅಸ್ತಿತ್ವದಲ್ಲಿರುವಾಗಿ **2** ನೇ ಪ್ರತಿವಾದಿಯೊಂದಿಗೆ ಮದುವೆ ಆಗಿರುತ್ತಾನೋ ಅಥವಾ ಅನೈತಿಕ ಸಂಬಂದವಿರುತ್ತದೆಯೋ ನನಗೆ ಗೊತ್ತಿಲ್ಲ. **1** ನೇ ಪ್ರತಿವಾದಿ **2** ನೇ ವಾದಿಯ ತಾಯಿಯೊಂದಿಗೆ ಮದುವೆ ಆದ ಬಗ್ಗೆ ನನಗೆ ಗೊತ್ತಿರುತ್ತದೆ, ಆದರೆ **2** ನೇ ವಾದಿಯ ತಾಯಿಯ ಹೆಸರು ನನಗೆ ಗೊತ್ತಿರುವುದಿಲ್ಲ.

ನನ್ನ ಮುಖ್ಯವಿಚಾರಣೆಯ **4** ನೇ ಪ್ಯಾರದಲ್ಲಿರುವ ಡ ನಂ.**1902** ಇದು ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ಹೇಳುತ್ತದೆ ಎಂದು ಹೇಳುತ್ತಾರೆ. ದಾವಾ ಸ್ವತ್ತು **1** ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ಮೊನ್ನಮ್ಮ ಎಂಬ ಹೆಸರಿನ ಮಹಿಳೆ ಪ್ರತಿವಾದಿಯ ಮನೆಯಲ್ಲಿ **2-3** ಜನ ಇರುತ್ತಾರೆ. ನಿ.ಪಿ.**26** ಕ್ಕೂ ಮತ್ತು ಆಧಾರ ಕಾರ್ಡಿನಲ್ಲಿರುವ ವಯಸ್ಸಿಗೂ ವ್ಯತ್ಯಾಸವಿರುತ್ತದೆ. **3** ರಿಂದ **5** ನೇ ಪ್ರತಿವಾದಿ ಕ್ರಮವಾಗಿ **3, 4, 7** ವರ್ಷದವರಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. **1** ಮತ್ತು **2** ನೇ ವಾದಿಗೆ ಜೇರಟಗಿ ಗ್ರಾಮದ ಖಾಯಂ ನಿವಾಸಿ ಎಂದರೆ ಸರಿಯಲ್ಲ. ವಾದಿಯರು ಬಬಲೂರು ಗ್ರಾಮದಲ್ಲಿ ಮತ ಚಲಾವಣೆ ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಬಗ್ಗೆ ಮತ್ತು ವಾದಿ ಮತ್ತು ಪ್ರತಿವಾದಿಯರ ಮನೆತನದ ಬಗ್ಗೆ ನನಗೆ ಏನು ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.